(ದಿನಾಂಕಃ 21-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಪಾಟಿ ಸವಾಲು : ಶ್ರೀ ಕೆ ಬಿ ಕೆ ವಾದಿ ಪರ ವಕೀಲರಿಂದ -

2 ರಿಂದ 5 ನೇ ಪ್ರತಿವಾದಿಯರ ಪರಿಚಯ ಇರುತ್ತದೆ. ಅವರು ನನಗೆ ಸಾಕ್ಷಿ ಹೇಳಲು ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ. 2 ನೇ ಪ್ರತಿವಾದಿ ಪ್ಲಾಟ ನಂ. 60 ನ್ನು ಖರೀದಿ ಮಾಡಿರುತ್ತಾರೆ. ಇದು ಸಿಟಿ ಎಸ್ ನಂ. 4335 ರಲ್ಲಿ ಬರುತ್ತದೆ.

3 ನೇ ಪ್ರತಿವಾದಿ ಸಿಟಿ ಎಸ್ ನಂ. 4335 ನ್ನು ಖರೀದಿ ಮಾಡಿರುತ್ತಾರೆ. ಅವರು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆ ಎಷ್ಟು ಹಣಕ್ಕೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ 4 ಮತ್ತು 5 ನೇ ಪ್ರತಿವಾದಿ ಸಿಟಿ ಎಸ್ ನಂ. 4335 ನ್ನು ಖರೀದಿ ಮಾಡಿರುತ್ತಾರೆ. ಅವರು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆ ಎಷ್ಟು ಹಣಕ್ಕೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಪ್ಲಾಟ ನಂಬರ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 2 ರಿಂದ 5 ನೇ ಪ್ರತಿವಾದಿಯರು ಯಾವ ಪ್ಲಾಟವನ್ನು ಖರೀದಿ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ. ಆದರೆ ನನಗೆ ಈಗ ಹೇಳಲು ಬರುವುದಿಲ್ಲ. 2 ರಿಂದ 5 ನೇ ಪ್ರತಿವಾದಿಯರ ಪ್ಲಾಟ ನಂಬರಗಳ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರ ಬರೆಸುವ ಸಮಯದಲ್ಲಿ ಖರೀದಿ ಪತ್ರ ಮತ್ತು ಸಿಟಿ ಎಸ್ ಉತಾರಗಳನ್ನು ಮತ್ತು ಪಂಚಾಯತಿ ಪರವಾನಿಗೆ ಪತ್ರಗಳನ್ನು ನೋಡಿ ಮಾಹಿತಿ ಕೊಟ್ಟಿರುತ್ತೇನೆ.

ಸಿ ಟಿ ಎಸ್ ನಂ. 4335 ರಲ್ಲಿ ಒಟ್ಟು 61 ಪ್ಲಾಟಗಳು ಮಂಜೂರು ಆಗಿದ್ದವು. ಆ ಸಮಯದಲ್ಲಿ 2 ಎಕರೆ ಬಿನ್ ಶೇತಗಿ ಜಮೀನು ಆಗಿರುತ್ತದೆ . ಸಿ ಟಿ ಎಸ್ ನಂ. 4335 ರಲ್ಲಿ ಒಟ್ಟು 61 ಪ್ಲಾಟಗಳು ಇದ್ದ ಬಗ್ಗೆ ಮಾಲೀಕರು ನಕಾಶೆಯನ್ನು ತೋರಿಸಿರುತ್ತಾರೆ. ನಾವು ಪ್ಲಾಟ ಆದ ಬಗ್ಗೆ ನಕ್ಷೆಯನ್ನು ನೋಡಿ ಖರೀದಿ ಮಾಡಿರುತ್ತೇವೆ. ಬಿನ್ ಶೇತಗಿ ಆದೇಶ ನೀಲಿ ನಕ್ಷೆ , ಪುರಸಭೆ ಆದೇಶ ಹಾಗೂ ನಗರ ಭೂಮಾಪನ ಇಲಾಖೆ ನಿಪ್ಪಾನಿರವರ ದಾಖಲೆಗಳನ್ನು ನೋಡಿರುವುದಿಲ್ಲ. ಈ ಎಲ್ಲಾ ದಾಖಲೆಗಳನ್ನು ನೋಡಿ ಖರೀದಿ

ಮಾಡಲು ಅಡಚಣೆ ಇರಲಿಲ್ಲ ಎಂದರೆ ನಾನು ಬೇರೆ ಕಡೆಗೆ ಇರುವುದರಿಂದ ಸಮಯ ಇರಲಿಲ್ಲ ಎಂದು ನುಡಿಯುತ್ತಾರೆ.

ಈ ಕೇಸಿನಲ್ಲಿ ವಾದಿಯು ಹಾಜರ ಪಡಿಸಿದ ದಾಖಲೆಗಳನ್ನು ನಮ್ಮ ವಕೀಲರ ಮೂಲಕ ನೋಡಿ ತಿಳಿದುಕೊಂಡಿರುತ್ತೇನೆ. ನಿ.ಪಿ-5 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ 1 ರಿಂದ 46 ಪ್ಲಾಟುಗಳು ಮುನಸಿಪಾಲಟಿಯಿಂದ ಮಂಜೂರು ಆದ ಬಗ್ಗೆ ನಮೂದು ಇದೆ ಎನ್ನುವ ಬಗ್ಗೆ ಒಪ್ಪಿಕೊಳ್ಳುತ್ತಾರೆ. ಸಿ ಟಿ ಎಸ್ ನಂ. 4335/ಎ ಇದು 30 ಗುಂಟೆ ಜಮೀನು ಬಿನ್ ಶೇತಗಿ ಆಗಿರುತ್ತದೆ. ಸಿ ಟಿ ಎಸ್ ನಂ. 4335/ಎ ಇದು 30 ಗುಂಟೆ ಜಮೀನು ಬಿನ್ ಶೇತಗಿ ಆಗಿರುತ್ತದೆ ಎಂದು ತೋರಿಸಲು ಯಾವುದೆ ದಾಖಲಾತಿಯನ್ನು ಹಾಜರ ಪಡಿಸಿರುವುದಿಲ್ಲ. 3 ಗುಂಟೆ ಜಮೀನು ಬಿನ್ ಶೇತಗಿ ಆದ ಬಗ್ಗೆ ದಾಖಲೆ ಹಾಜರ ಪಡಿಸಲು ಆಗುವುದಿಲ್ಲ.

ವಾದಿಯು 30 ಗುಂಟೆ ಜಮಿನನ್ನು ಅಳತೆ ಮಾಡಿ ಹದ್ದು ಬಸ್ತು ಮಾಡಿಕೊಬೇಕೆಂದು ಹುಕ್ಕೇರಿಯ ಭೂಮಾಪನ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ-3 ರಂತೆ ಭೂಮಾಪನ ಅಧಿಕಾರಿಗಳು ನೋಟಿಸು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 21-11-2015 ರಂತೆ ಮೋಜಣಿ ಅಧಿಕಾರಿಗಳು ಜಮೀನಿಗೆ ಬಂದು ಅಳತೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಅಳತೆ ಮಾಡಿ ಸರ್ವೆ ನಂ. 118/ಅ/2 ಜಮೀನು ಶೇತಗಿ ಜಮೀನು ಇದೆ ಎಂದು ಪಿಟಿ ಶೀಟ ತಯಾರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗಲೂ ಸಹ 7 ಎಕರೆ 13 ಗುಂಟೆ ಜಮೀನನ್ನು ಕೋರ್ಟನಿಂದ ಅಳತೆ ಮಾಡಲು ಯಾವುದೇ ತಕರಾರು ಇರುವುದಿಲ್ಲ. ವಾದಿಯು ವಾದ ಪತ್ರದೊಂದಿಗೆ ಸಲ್ಲಿಸಿದ ಹಾತ್ ನಕಾಶೆಯನ್ನು ಸಾಕ್ಷಿಗೆ ತೋರಿಸಲಾಗಿ ಸರಿ ಇದೆ ಎಂದು ಒಪ್ಪಿಕೊಳ್ಳುತ್ತಾರೆ.

ಮುಖ್ಯ ವಿಚಾರಣೆಯ 6 ನೇ ಪ್ಯಾರಾದಲ್ಲಿ ಸಿಟಿಎಸ್ 4335 ನೇದ್ದಲ್ಲಿ 1 ರಿಂದ 46 ಮತ್ತು ಸಿಟಿಎಸ್ ನಂ. 4335 ಎ ರಲ್ಲಿ 47 ರಿಂದ 61 ನೇ ಪ್ಲಾಟಗಳು ಎಂದು ನಮೂದಿಸಿರುತ್ತೇವೆ ಎಂದರೆ ಸರಿ . ಸಿಟಿಎಸ್ ನಂ. 4335 ಎ ಇದು ಎಷ್ಟು ಎಕರ ಬಿನ್

ಶೇತಗಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 118 ಅ/2 ಇದರ ಪಿಟಿ ಶೀಟನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದರಿಂದ ನಿ.ಪಿ-19 ಎಂದು ಗುರುತಿಸಲಾಯಿತು ಸಾಕ್ಷಿ ಮುಂದುವರೆದು ಆ ಜಮೀನುಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಡಿ-11 ರ ಖರಿದಿ ಪತ್ರದಲ್ಲಿ ನಾನು ಖರೀದಿಸಿದ ಪ್ಲಾಟ ನಂಬರ 47 ಇದ್ದು ಅದು ಸಿಟಿಎಸ್ ನಂ. 4335 ರಲ್ಲಿ ಇರುತ್ತದೆ ಎಂದರೆ ಸರಿ . ನಿ.ಡಿ-44 ರಲ್ಲಿ ಸಿಟಿಎಸ್ ನಂ. 4335/ಎ ಎಂದು ಇದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನಾವು ಖರೀದಿ ಮಾಡಿ ನಂತರ ಟಿಎಸ್ ನಂಬರ ಬದಲಾಗಿರುತ್ತದೆ ಎಂದು ನುಡಿಯುತ್ತಾರೆ.

**( ಈ ಹಂತದಲ್ಲಿ ಮುಂದುವರೆದ** ಪಾಟೀ ಸವಾಲಿಗೆ **ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು.)**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ